ಮಕ್ಕಳಿಗಾಗಿ, ಮಕ್ಕಳಿಗೋಸ್ಕರ, ಮಕ್ಕಳಿಂದಲೇ ಸಮುದಾಯಕ್ಕೆ
ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜನಜಾಗೃತಿಗಾಗಿ



# ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ಅಭಿಯಾನ





ನಿರ್ವಹಣೆ

## ಪಡಿ ಮಂಗಳೂರು

ಸಹಭಾಗಿತ್ವ

## ಶಿಕ್ಷಣ ಸಂಪನ್ಮೂಲ ಕೇಂದ್ರಗಳು

# ಶಿಕ್ಷಣ ಜಾಗೃತಿಗಾಗಿ ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ಅಭಿಯಾನ

ಪ್ರಾಥಮಿಕ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕತೆಯ ಕಲಿಕೆಯನ್ನು ಖಾತರಿಗೊಳಿಸುವ ಅಂಶಗಳನ್ನು ಹಲವಾರು ಆಯಾಮಗಳಲ್ಲಿ ನೋಡ ಬೇಕಾಗುತ್ತದೆ. ಶಾಲಾ ಹಂತದಲ್ಲಿ ಮಗುವಿನ ಶಿಕ್ಷಣ ಹಾಗೂ ಕಲಿಕೆಯು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯ ಚಟುವಟಿಕೆಗಳಾಗಿ ನಡೆಯುವುದರಿಂದ ಮಕ್ಕಳಲ್ಲಿ ಕ್ರಿಯಾಶೀಲತೆಯನ್ನು ಹೆಚ್ಚಿಸಲು ಅನುಕೂಲಕರ ವಾತಾವರಣದ ಅಗತ್ಯತೆ ಅತೀ ಅವಶ್ಯಕವಾದುದು. ಗುಣಾತ್ಮಕ ಶಿಕ್ಷಣ ಎಂದಾಗ ಮಕ್ಕಳು. ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿಗಳು ಮಾತ್ರ ಅಲ್ಲದೆ ಶಾಲಾ ಹಂತದಲ್ಲಿ ಇಡೀ ಸಮುದಾಯ ಅಂದರೆ ಪೋಷಕರ, ಸ್ಥಳೀಯ ಸರಕಾರಗಳ, ಸಂಘ ಸಂಸ್ಥೆಗಳ ಸಕ್ರೀಯ ಪಾಲ್ಗೊಳ್ಳುವಿಕೆಯು ಗುಣಾತ್ಮಕತೆಯ ಶಿಕ್ಷಣದ ಸೂಚ್ಯಂಕಗಳಾಗಿವೆ, ಯಾಕೆಂದರೆ ಸಮುದಾಯವು ಕೂಡಾ ಶಿಕ್ಷಣ ಎಂದರೇನು? ಮಕ್ಕಳಿಗೆ ಎಂತಹ ಶಿಕ್ಷಣ ಬೇಕು? ಹಾಗೂ ಸರಕಾರಿ ಇಲಾಖೆ, ಪೋಷಕರು, ಸಮುದಾಯವನ್ನು ಶಾಲಾಭಿವೃದ್ಧಿಗಾಗಿ ಯಾಕೆ ಹತ್ತಿರ ತರಬೇಕು? ಹಾಗೂ ಎಸ್.ಡಿ.ಎಂ.ಸಿ, ಶಿಕ್ಷಕರು, ಮಕ್ಕಳು ಮತ್ತು ಸಮುದಾಯದ ಭಾಗವಹಿಸುವಿಕೆಯ ಮೂಲಕ ಮಕ್ಕಳ ಹಕ್ಕುಗಳನ್ನು ಖಾತರಿಗೊಳಿಸುವ ಅಗತ್ಯವಿದೆಯೆ? ಎಂಬುದನ್ನು ಅರ್ಥ ಮಾಡಿಕೊಳ್ಳದ ಹೊರತು ಶಾಲೆಯ ಅಭಿವೃದ್ಧಿಯಲ್ಲಿ ಸರ್ವರ ಭಾಗವಹಿಸುವಿಕೆಯನ್ನು ಖಾತರಿಗೊಳಿಸಲು ಸಾಧ್ಯವಿಲ್ಲ.



ಕುಂದಾಪುರದ 'ಬೆಳಕು' ತಂಡ



ಕಾರ್ಕಳದ 'ಕಲಾಸಿರಿ' ತಂಡ



ಸುಳ್ಯದ 'ಮಕ್ಕಳ ಹೆಜ್ಜೆ' ತಂಡ



ಪುತ್ತೂರಿನ 'ಸಂಸಾರ' ತಂಡ



ಬೆಳ್ತಂಗಡಿಯ 'ಬಾಲ್ಯದ ಐಸಿರಿ' ತಂಡ



ಬಂಟ್ವಾಳದ 'ಕನಸು' ತಂಡ

ಈ ನಿಟ್ಟಿನಲ್ಲಿ 'ಪಡಿ' ಸಂಸ್ಥೆಯು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸಹಕಾರ ಮತ್ತು ಸಹಭಾಗಿತ್ವದಲ್ಲಿ ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡವನ್ನು ರಚಿಸಿ ಈ ಮೂಲಕ ಸಮುದಾಯದಲ್ಲಿ ಶೈಕ್ಷಣಿಕ ಜಾಗೃತಿ ಮೂಡಿಸುವ ಪ್ರಯತ್ನದ ಹೊಸ ಹೆಜ್ಜೆಯಾಗಿದೆ, ಈ ರಂಗ ತಂಡವು ದ.ಕ ಜಿಲ್ಲೆಯ ಸುಳ್ಯ, ಪುತ್ತೂರು, ಬಂಟ್ವಾಳ ಮತ್ತು ಬೆಳ್ತಂಗಡಿ ಹಾಗೂ ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಕಾರ್ಕಳ ತಾಲೂಕಿನಲ್ಲಿ ರಚನೆಗೊಂಡು ನುರಿತ ರಂಗಕರ್ಮಿಗಳಿಂದ ತರಬೇತಿಯನ್ನು ಪಡೆದು ಅಸ್ತಿತ್ವಕ್ಕೆ ಬಂದಿರುತ್ತದೆ.

ಈ ತಂಡಗಳ ಮೇಲ್ವಿಚಾರಣೆಯನ್ನು ಆಯಾಯ ತಾಲೂಕಿನ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರಗಳು ವಹಿಸಿಕೊಳ್ಳುತ್ತಿದ್ದಾರೆ. ಈ ಶೈಕ್ಷಣಿಕ ರಂಗ ತಂಡವು ಆಯಾಯ ತಾಲೂಕಿನಲ್ಲಿ ಸಮುದಾಯದಲ್ಲಿ ಶೈಕ್ಷಣಿಕ ಜಾಗೃತಿಗಾಗಿ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಜಾಗೃತಿ ಮೂಡಿಸುವ ಸಲುವಾಗಿ ಕಾರ್ಯಚರಿಸಲಿದೆ. ಈ ಒಂದು ಪ್ರಯತ್ನಕ್ಕೆ ಸಮುದಾಯದ ಪ್ರತಿಯೊಬ್ಬರು ತನು–ಮನ–ಧನಗಳಿಂದ ಸಹಕರಿಸಿ ಕೈ ಜೋಡಿಸಬೇಕೆಂಬುದು ನಮ್ಮ ಅರಿಕೆ.

## ಗುರಿ:

ಶಾಲಾ ಶಿಕ್ಷಣದಲ್ಲಿ ಸಾಂವಿಧಾನಿಕ ಮೌಲ್ಯಗಳ ಅನುಷ್ಠಾನದ ಮೂಲಕ ಮಗುಸ್ನೇಹಿ ಶಾಲೆ ಮತ್ತು ಸಮಾಜದ ನಿರ್ಮಾಣ

## ಉದ್ದೇಶ

1. ಶಾಲೆಗಳಲ್ಲಿ ರಂಗಶಿಕ್ಷಣದ ಮೂಲಕ ಎಲ್ಲಾ ಮಕ್ಕಳ ಕಲಿಕೆಯನ್ನು ಉತ್ತಮಗೊಳಿಸುವುದು ಮತ್ತು ವೃದ್ದಿಸುವುದು.
2. ಸಮುದಾಯಕ್ಕೆ ಶಾಲೆ ನಮ್ಮದು ಎನ್ನುವ ಸಂಬಂಧವನ್ನು ಬೆಳೆಸುವುದು.
3. ಸಮುದಾಯಕ್ಕೆ ಮಕ್ಕಳ ಹಕ್ಕು ಮತ್ತು ಮಕ್ಕಳ ಹಕ್ಕುಗಳ ಅನುಷ್ಠಾನದ ವಿವಿಧ ವ್ಯವಸ್ಥೆಗಳ ಕರ್ತವ್ಯದ ಬಗ್ಗೆ ಜಾಗೃತಿ ಮೂಡಿಸುವುದು.
4. ಮಕ್ಕಳು ಮತ್ತು ಸಮುದಾಯದಲ್ಲಿ ಸಾಮಾಜಿಕ ಜವಾಬ್ದಾರಿ ಹಾಗೂ ಮೌಲ್ಯಗಳನ್ನು ಬೆಳೆಸುವುದು.
5. ಮಕ್ಕಳು ಮತ್ತು ಸಮುದಾಯದಲ್ಲಿ ವೈಚಾರಿಕತೆಯ ಚಿಂತನೆಯನ್ನು ಬೆಳೆಸುವುದು

## ತಂಡದ ರಚನೆ

1. ದ.ಕ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ 6 ಕ್ಲಸ್ಟರ್ ಹಂತದಲ್ಲಿ ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡವನ್ನು ರಚಿಸಲಾಗಿದೆ
2. ಪ್ರತಿ ಶೈಕ್ಷಣಿಕ ರಂಗ ತಂಡದಲ್ಲಿ 20 ರಿಂದ 25 ಮಕ್ಕಳು ಭಾಗವಹಿಸುತ್ತಾರೆ.
3. ಲಿಂಗ ಸಮಾನತೆಯನ್ನು ಕಾಯ್ದುಕೊಳ್ಳಲಾಗಿದೆ.
4. ಪ್ರತಿ ಶೈಕ್ಷಣಿಕ ರಂಗ ತಂಡದಲ್ಲಿ ತಂಡದ ಸದಸ್ಯರನ್ನು ಆಯ್ಕೆ ಮಾಡುವಾಗ ಮಕ್ಕಳ ಪೋಷಕರ ಒಪ್ಪಿಗೆ ಪಡೆದುಕೊಳ್ಳಲಾಗಿದೆ.
5. ಆಯಾಯ ತಾಲೂಕಿನ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಶೈಕ್ಷಣಿಕ ರಂಗ ತಂಡದ ಜವಾಬ್ದಾರಿಗಳನ್ನು ವಹಿಸಲಿರುವರು.

## ಸಹಕಾರ ಮತ್ತು ಸಹಭಾಗಿತ್ವ :

ಸರಕಾರದ ವಿವಿದ ಇಲಾಖಾ ಸಹಕಾರ ಮತ್ತು ಸಹಯೋಗದಲ್ಲಿ ಹಾಗೂ ವಿವಿಧ ಸಂಘಸಂಸ್ಥೆಗಳ ಸಹಯೋಗದಲ್ಲಿ ಅನುಷ್ಠಾನಿಸುವುದು. ಉದಾ:ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನೆಹರು ಯುವ ಕೇಂದ್ರ, ವಯಸ್ಕರ ಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿವಿಧ ಸ್ವಯಂಸೇವಾ ಸಂಸ್ಥೆಗಳು ಇತ್ಯಾದಿ.

## ಎಲ್ಲೆಲ್ಲಿ ತಂಡದ ಬಳಕೆ:

ಮಗುಸ್ನೇಹಿ ಶಾಲೆ ಕಾರ್ಯಚಟುವಟಿಕೆಗೆ ಆಯ್ಕೆ ಮಾಡಲಾದ ಸರಕಾರಿ ಶಾಲೆಗಳು, ಈ ಶಾಲಾ ವ್ಯಾಪ್ತಿಯ ಜನ ಸಮುದಾಯ ಕ್ಷೇತ್ರ, ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳು, ಪಂಚಾಯತ್‌ನ ವಿವಿಧ ಗ್ರಾಮ ಸಭೆಗಳು, ಶಾಲಾ ವಾರ್ಷಿಕೋತ್ಸವಗಳಲ್ಲಿ, ಇನ್ನಿತರ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಬಳಕೆ ಮಾಡಬಹುದಾಗಿದೆ.

ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಪ್ರದರ್ಶನವನ್ನು ನೀಡಲು ಈ ತಂಡಗಳು ತಯಾರಿದ್ದು ಸಂಘಟಕರು, ಆಯೋಜಕರು ಶಿಕ್ಷಣ ಸಂಪನ್ಮೂಲ ಕೇಂದ್ರವನ್ನು ಸಂಪರ್ಕಿಸಬಹುದಾಗಿದೆ.

## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:


**ಅಧ್ಯಕ್ಷರು**
ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ(ರಿ) ದ.ಕ.
ಮೀನಾ ಬಜಾರ್, 2 ನೇ ಮಹಡಿ,
ಬಿ.ಸಿ.ರೋಡ್ ಬಸ್‌ಸ್ಟ್ಯಾಂಡ್ ಹಿಂಬದಿ,
ಬಂಟ್ವಾಳ 574219
ದೂರವಾಣಿ ಸಂಖ್ಯೆ: 0824 2439895

**ಅಧ್ಯಕ್ಷರು**
ಶಿಕ್ಷಣ ಸಂಪನ್ಮೂಲ ಕೇಂದ್ರ ಮಂಗಳೂರು ಘಟಕ
C/o ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ,
ಕುಲಾಸೋ ಆಸ್ಪತ್ರೆಯ ಬಳಿ,
2ನೇ ಅಡ್ಡರಸ್ತೆ, ಬೆಂದೂರ್‌ವೆಲ್,
ಮಂಗಳೂರು: 575 002.

**ಅಧ್ಯಕ್ಷರು**
ಶಿಕ್ಷಣ ಸಂಪನ್ಮೂಲ ಕೇಂದ್ರ ಬಂಟ್ವಾಳ ಘಟಕ
ಮೀನಾ ಬಜಾರ್, 2 ನೇ ಮಹಡಿ,
ಬಿ.ಸಿ.ರೋಡ್ ಬಸ್‌ಸ್ಟ್ಯಾಂಡ್ ಹಿಂಬದಿ,
ಬಂಟ್ವಾಳ 574219

**ಅಧ್ಯಕ್ಷರು**
ಶಿಕ್ಷಣ ಸಂಪನ್ಮೂಲ ಕೇಂದ್ರ ಬೆಳ್ತಂಗಡಿ ಘಟಕ
ನೆಲಮಹಡಿ, ಸುವರ್ಣ ಆರ್ಕೇಡ್,
ಸಂತೆಕಟ್ಟೆ, ಬೆಳ್ತಂಗಡಿ

**ಅಧ್ಯಕ್ಷರು**
ಶಿಕ್ಷಣ ಸಂಪನ್ಮೂಲ ಕೇಂದ್ರ ಪುತ್ತೂರು ಘಟಕ
ಕೊಠಡಿ ಸಂಖ್ಯೆ 21, 1 ನೇ ಮಹಡಿ,
ಪುರಸಭಾ ವಾಣಿಜ್ಯ ಸಂಕೀರ್ಣ,
ಕೆ. ಎಸ್. ಆರ್.ಟಿ.ಸಿ ಬಸ್ ನಿಲ್ದಾಣದ ಬಳಿ,
ಪುತ್ತೂರು 574 214

**ಅಧ್ಯಕ್ಷರು**
ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ (ರಿ.)
ಉಡುಪಿ
ಟಿ.ಎ.ಪಿ.ಸಿ.ಎಂ.ಎಸ್ ಕಟ್ಟಡದ ಎರಡನೇ ಮಹಡಿ,
ಪೂರ್ಣ ಪ್ರಜ್ಞಾ ಕಾಲೇಜು ರಸ್ತೆ
ಉಡುಪಿ–576 101

**ಅಧ್ಯಕ್ಷರು**
ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರ ಉಡುಪಿ
ಟಿ.ಎ.ಪಿ.ಸಿ.ಎಂ.ಎಸ್ ಕಟ್ಟಡದ ಎರಡನೇ ಮಹಡಿ,
ಪೂರ್ಣ ಪ್ರಜ್ಞಾ ಕಾಲೇಜು ರಸ್ತೆ ಉಡುಪಿ –576 101

**ಅಧ್ಯಕ್ಷರು**
ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರ ಕಾರ್ಕಳ
C/o ರವಿ ಶೆಟ್ಟಿ ಕೆ.ಇ.ಬಿ ರಸ್ತೆ,
ನಿಯರ್ ಕಿಸಾನ್ ಸಭಾಭವನ
ಸಾಲ್ಮರ ಕಾರ್ಕಳ– 576 146

**ಅಧ್ಯಕ್ಷರು**
ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರ
ಕುಂದಾಪುರ
ಭಗವಾನ್ ಬಿಲ್ಡಿಂಗ್, 1ನೇ ಮಹಡಿ
ಭಗವಾನ್ ರಸ್ತೆ, ಕುಂದಾಪುರ

**ಅಧ್ಯಕ್ಷರು**
ಶಿಕ್ಷಣ ಸಂಪನ್ಮೂಲ ಕೇಂದ್ರ ಸುಳ್ಯ ಘಟಕ
ಶಿವಕೃಪಾ ಕಲಾ ಮಂದಿರ
ಖಾಸಗಿ ಬಸ್ ನಿಲ್ದಾಣದ ಬಳಿ,
ಸುಳ್ಯ– 574 239.



## ಪ್ರಕಟಣೆ

**‘ಪಡಿ’** (ಗುಣಾತ್ಮಕ ಶಿಕ್ಷಣಕ್ಕಾಗಿ ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ)
“ಗಣೇಶ, ಕುಲಾಸೊ ಆಸ್ಪತ್ರೆಯ ಬಳಿ, 2ನೇ ಅಡ್ಡ ರಸ್ತೆ, ಬೆಂದೂರ್‌ವೆಲ್,
ಮಂಗಳೂರು – 2, ದೂರವಾಣಿ : 0824–2439895
**www.padivalored.com**